ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1208 (1371)
ಮಾನ್ಯ ಸದಸ್ಯರ ಹೆಸರು	ಶ್ರೀ ಕವಟಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	23/09/2021
ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಕಟ್ಟಡ ನಿರ್ಮಾಣ ವಲಸೆ ಕಾರ್ಮಿಕರಿಗೆ ನೀಡಲಾಗುವ ಆಹಾರ ಕಿಟ್ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ;	ಕೋವಿಡ್-19ರ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರಿಗೆ ವಿತರಿಸಲಾದ ಆಹಾರ ಕಿಟ್ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿರುವ ಕುರಿತು ಯಾವುದೇ ವರದಿಯಾಗಿರುವುದಿಲ್ಲ.
ಆ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನೋಂದಾವಣೆಗೊಂಡಿರುವ ಕಟ್ಟಡ ವಲಸೆ ಕಾರ್ಮಿಕರ ಸಂಖ್ಯೆ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)	ಮಂಡಳಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಟ್ಟಡ ವಲಸೆ ಕಾರ್ಮಿಕರು ನೋಂದಣಿಯಾದ ಪ್ರತ್ಯೇಕ ಮಾಹಿತಿ ಇರುವುದಿಲ್ಲ. ಆದರೆ, ಕಳೆದ ಮೂರು ವರ್ಷಗಳಲ್ಲಿ ವಲಸೆ ಕಟ್ಟಡ ಕಾರ್ಮಿಕರು ಸೇರಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ಒಟ್ಟು 15,52,717 ಕಾರ್ಮಿಕರನ್ನು ನೋಂದಣಿ ಮಾಡಿಕೊಳ್ಳಲಾಗಿದೆ. ಅದರ ವರ್ಷಾವಾರು ವಿವರ ಈ ಕೆಳಕಂಡಂತಿದೆ. ಕ್ರ. ಸಂ. / ವರ್ಷ / ನೋಂದಣಿಯಾದ ಕಾರ್ಮಿಕರ ಸಂಖ್ಯೆ 1 / 2018-19 / 2,96,583 2 / 2019-20 / 2,97,000 3 / 2020-21 / 9,59,134
ಇ)	ಕೋವಿಡ್-19ರ ಅವಧಿಯಲ್ಲಿ ಇಲಾಖೆಯ ವತಿಯಿಂದ ವಲಸೆ ಕಟ್ಟಡ ಕಾರ್ಮಿಕರಿಗೆ ಎಷ್ಟು ಕಿಟ್ ವಿತರಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ವಲಸೆ ಕಟ್ಟಡ ಕಾರ್ಮಿಕರು ಸೇರಿದಂತೆ ರಾಜ್ಯದಲ್ಲಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕೋವಿಡ್-19ರ ಮೊದಲನೇ ಅಲೆ ಸಂದರ್ಭದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಒಟ್ಟು 7.15 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು, ಕೋವಿಡ್-19ರ 2ನೇ ಅಲೆ ಸಂದರ್ಭದಲ್ಲಿ 23.42 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಮತ್ತು 22.07 ಲಕ್ಷ ರಕ್ಷಣಾ ಮತ್ತು ನೈರ್ಮಲ್ಯೀಕರಣ ಕಿಟ್‌ಗಳನ್ನು ಹಾಗೂ ಅಸಂಘಟಿತ ವಲಯದ ನೋಂದಾಯಿತ ಕಾರ್ಮಿಕರಿಗೆ 3.80 ಲಕ್ಷ ಆಹಾರ ಸಾಮಾಗ್ರಿ ಕಿಟ್‌ಗಳನ್ನು ವಿತರಿಸಲಾಗಿದೆ.

		ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಹಾಗೂ ಅಸಂಘಟಿತ ಕಾರ್ಮಿಕರಿಗೆ ಜಿಲ್ಲಾವಾರು ಹಂಚಿಕೆ ಮಾಡಿರುವ ವಿವರವನ್ನು **ಅನುಬಂಧ-01, 02, 03 ಮತ್ತು 04ರಲ್ಲಿ ಲಗತ್ತಿಸಿದೆ.**
ಈ)	ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನೋಂದಾಯಿಸಲ್ಪಟ್ಟ ವಲಸೆ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು; (ಮಾಹಿತಿ ಹಾಗೂ ವಿತರಿಸಲಾದ ಕಿಟ್‌ಗಳ ಮಾಹಿತಿ ಒದಗಿಸುವುದು)	ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಲಸೆ ಕಟ್ಟಡ ಕಾರ್ಮಿಕರು ಸೇರಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ಒಟ್ಟು 71,300 ಕಾರ್ಮಿಕರನ್ನು ನೋಂದಣಿ ಮಾಡಿಕೊಳ್ಳಲಾಗಿದೆ. ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಕೋವಿಡ್-19ರ ಮೊದಲನೇ ಅಲೆ ಸಂದರ್ಭದಲ್ಲಿ ಒಟ್ಟು 62,000 ಆಹಾರ ಸಾಮಗ್ರಿ ಕಿಟ್‌ಗಳನ್ನು, ಕೋವಿಡ್ 2ನೇ ಅಲೆ ಸಂದರ್ಭದಲ್ಲಿ ಒಟ್ಟು 1,60,000 ಆಹಾರ ಸಾಮಗ್ರಿ ಕಿಟ್‌ಗಳನ್ನು ಮತ್ತು 1,01,000 ರಕ್ಷಣಾ ಮತ್ತು ನೈರ್ಮಲ್ಯೀಕರಣ ಕಿಟ್‌ಗಳನ್ನು ಹಾಗೂ ಅಸಂಘಟಿತ ವಲಯದ ನೋಂದಾಯಿತ ಕಾರ್ಮಿಕರಿಗೆ ಒಟ್ಟು 15,000 ಆಹಾರ ಸಾಮಗ್ರಿ ಕಿಟ್‌ಗಳನ್ನು ವಿತರಿಸಲಾಗಿರುತ್ತದೆ.
ಉ)	ವಲಸೆ ಕಟ್ಟಡ ಕಾರ್ಮಿಕರಿಗೆ ಕೋವಿಡ್-19ರ ಅವಧಿಯಲ್ಲಿ ವಿತರಿಸಲಾಗಿರುವ ಕಿಟ್‌ಗಳಿಗೆ ವಿನಿಯೋಗಿಸಿದ ಹಣವನ್ನು ಯಾವ ಲೆಕ್ಕ ಶೀರ್ಷಿಕೆಯಡಿ ಭರಿಸಲಾಗಿದೆ?	ವಲಸೆ ಕಟ್ಟಡ ಕಾರ್ಮಿಕರು ಸೇರಿದಂತೆ ರಾಜ್ಯದಲ್ಲಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಿತರಿಸಲಾದ ಆಹಾರ ಸಾಮಗ್ರಿಗಳ ಕಿಟ್‌ಗಳಿಗೆ ವಿನಿಯೋಗಿಸಿದ ಹಣವನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಮಿಕ ಕಲ್ಯಾಣ ಸುಂಕ ನಿಧಿಯಿಂದ ಭರಿಸಲಾಗಿದೆ.

ಕಾಇ 426 ಎಲ್‌ಇಟಿ 2021

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-1

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಪೂರೈಸಲಾದ ಫುಡ್ ಕಿಟ್‌ಗಳ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಹಂಚಿಕೆ ಮಾಡಲಾಗಿರುವ ಫುಡ್ ಕಿಟ್‌ಗಳ ಸಂಖ್ಯೆ
1	ಬೆಂಗಳೂರು ನಗರ	3,13,348
2	ಬಿ.ಬಿ.ಎಂ.ಪಿ	79,519
3	ಬೆಂಗಳೂರು ಗ್ರಾಮಾಂತರ	14,935
4	ರಾಮನಗರ	19,000
5	ಚಿಕ್ಕಬಳ್ಳಾಪುರ	7,000
6	ಕೋಲಾರ	3,025
7	ತುಮಕೂರು	22,375
8	ಮಂಡ್ಯ	8,798
9	ಹಾಸನ	27,000
10	ಉಡುಪಿ	5,000
11	ಕಲಬುರಗಿ	17,000
12	ಚಿತ್ರದುರ್ಗ	10,000
13	ಕೊಪ್ಪಳ	12,000
14	ಹಾವೇರಿ	30,500
15	ಉತ್ತರಕನ್ನಡ	24,000
16	ಹುಬ್ಬಳ್ಳಿ - ಧಾರವಾಡ	27,500
17	ದಾವಣಗೆರೆ	5000
18	ಬೆಳಗಾವಿ	62,000
19	ಚಾಮರಾಜನಗರ	5,000
20	ಬೀದರ್	4,000
21	ಯಾದಗಿರಿ	3,000
22	ರಾಯಚೂರು	3,000
23	ಗದಗ	12,000
	ಒಟ್ಟು	**7,15,000**

ಅನುಬಂಧ-೦2

ಕೋವಿಡ್-19ರ 2ನೇ ಅಲೆಯ ಸಂದರ್ಭದಲ್ಲಿ ಮಂಡಳಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಿತರಿಸಿರುವ ಆಹಾರ ಸಾಮಾಗ್ರಿಗಳ ಕಿಟ್‌ಗಳ ಜಿಲ್ಲಾವಾರು ವಿವರ

ಕ್ರ. ಸಂ.	ಕಛೇರಿಯ ಹೆಸರು	ಕಿಟ್‌ಗಳ ವಿವರ
1	ಬಾಗಲಕೋಟೆ	65000
2	ಬೆಂಗಳೂರು	482000
3	ಬೆಂಗಳೂರು ಗ್ರಾಮಾಂತರ	40000
4	ಬೆಳಗಾವಿ	160000
5	ಬಳ್ಳಾರಿ	65000
6	ಬೀದರ್	120000
7	ಬಿಜಾಪುರ	50000
8	ಚಾಮರಾಜನಗರ	25000
9	ಚಿಕ್ಕಬಳ್ಳಾಪುರ	38000
10	ಚಿಕ್ಕಮಗಳೂರು	55000
11	ಚಿತ್ರದುರ್ಗ	50000
12	ದಾವಣಗೆರೆ	115000
13	ಗದಗ	35000
14	ಹಾಸನ	80000
15	ಹಾವೇರಿ	100000
16	ಹುಬ್ಬಳ್ಳಿ	85000
17	ಕಲಬುರಗಿ	137000
18	ಕಾರವಾರ	65000
19	ಕೋಲಾರ	70000
20	ಕೊಪ್ಪಳ	50000
21	ಕೊಡಗು	4000
22	ಮಂಡ್ಯ	30000
23	ಮಂಗಳೂರು	40000
24	ಮೈಸೂರು	60000
25	ರಾಯಚೂರು	35000
26	ರಾಮನಗರ	27000
27	ಶಿವಮೊಗ್ಗ	112000
28	ತುಮಕೂರು	58000
29	ಉಡುಪಿ	34000
30	ಯಾದಗಿರಿ	55000
	ಒಟ್ಟು	23,42,000

ಅನುಬಂಧ-03

ಕೋವಿಡ್-19ರ 2ನೇ ಅಲೆಯ ಸಂದರ್ಭದಲ್ಲಿ ಮಂಡಳಿಯಿಂದ ಕಟ್ಟಡ ಮತ್ತುಇತರೆ ನಿರ್ಮಾಣಕಾರ್ಮಿಕರಿಗೆ ವಿತರಿಸಿರುವ ರಕ್ಷಣಾ ಮತ್ತು ನೈರ್ಮಲ್ಯೀಕರಣದಕಿಟ್‌ಗಳ ಜಿಲ್ಲಾವಾರು ವಿವರ

ಕ್ರ. ಸಂ.	ಕಛೇರಿಯ ಹೆಸರು	ಕಿಟ್‌ಗಳ ವಿವರ
1	ಬಾಗಲಕೋಟೆ	50000
2	ಬೆಂಗಳೂರು	358000
3	ಬೆಳಗಾವಿ	101000
4	ಬಳ್ಳಾರಿ	70000
5	ಬೀದರ್	1,53,000
6	ಬಿಜಾಪುರ	56000
7	ಚಾಮರಾಜನಗರ	35000
8	ಚಿಕ್ಕಬಳ್ಳಾಪುರ	26000
9	ಚಿಕ್ಕಮಗಳೂರು	54000
10	ಚಿತ್ರದುರ್ಗ	64000
11	ದಾವಣಗೆರೆ	75000
12	ಗದಗ	36000
13	ಹಾಸನ	51000
14	ಹಾವೇರಿ	95000
15	ಹುಬ್ಬಳ್ಳಿ	82000
16	ಕಲಬುರಗಿ	147000
17	ಕಾರವಾರ	67000
18	ಕೋಲಾರ	66000
19	ಕೊಪ್ಪಳ	50000
20	ಕೊಡಗು	6000
21	ಮಂಡ್ಯ	45000
22	ಮಂಗಳೂರು	59000
23	ಮೈಸೂರು	76000
24	ರಾಯಚೂರು	37000
25	ರಾಮನಗರ	34000
26	ಶಿವಮೊಗ್ಗ	77000
27	ತುಮಕೂರು	55000
28	ಉಡುಪಿ	34000
29	ಯಾದಗಿರಿ	48000
	ಒಟ್ಟು	21,07,000

ಅನುಬಂಧ-04

ಅಸಂಘಟಿತ ಮತ್ತು ವಲಸೆ ಕಾರ್ಮಿಕರಿಗೆ ವಿತರಿಸಿರುವ ಆಹಾರ ಸಾಮಗ್ರಿಗಳ ಕಿಟ್‌ಗಳ ಜಿಲ್ಲಾವಾರು ವಿವರ

ಕ್ರ. ಸಂ.	ಕಛೇರಿಯ ಹೆಸರು	ಕಿಟ್‌ಗಳ ವಿವರ
1	ಬಾಗಲಕೋಟೆ	10000
2	ಬೆಂಗಳೂರು	89000
3	ಬೆಂಗಳೂರು ಗ್ರಾಮಾಂತರ	10000
4	ಬೆಳಗಾವಿ	15000
5	ಬಳ್ಳಾರಿ	10000
6	ಬೀದರ್	10000
7	ಬಿಜಾಪುರ	15000
8	ಚಾಮರಾಜನಗರ	8000
9	ಚಿಕ್ಕಬಳ್ಳಾಪುರ	8000
10	ಚಿಕ್ಕಮಗಳೂರು	8000
11	ಚಿತ್ರದುರ್ಗ	8000
12	ದಾವಣಗೆರೆ	10000
13	ಗದಗ	10000
14	ಹಾಸನ	8000
15	ಹಾವೇರಿ	10000
16	ಹುಬ್ಬಳ್ಳಿ	15000
17	ಕಲಬುರಗಿ	15000
18	ಕಾರವಾರ	15000
19	ಕೋಲಾರ	8000
20	ಕೊಪ್ಪಳ	10000
21	ಕೊಡಗು	2000
22	ಮಂಡ್ಯ	8000
23	ಮಂಗಳೂರು	10000
24	ಮೈಸೂರು	10000
25	ರಾಯಚೂರು	10000
26	ರಾಮನಗರ	8000
27	ಶಿವಮೊಗ್ಗ	10000
28	ತುಮಕೂರು	10000
29	ಉಡುಪಿ	10000
30	ಯಾದಗಿರಿ	10000
	ಒಟ್ಟು	3,80,000